# 1

ಪೊಲೀಸರ ಹಿಡಿತದಿಂದ ತಪ್ಪಿಸಿಕೊಂಡು ಅಡಗಿದ್ದ ಜಗದೀಶ ರಾತ್ರಿಯಲ್ಲಿ ತಡವರಿಸುತ್ತ ನಡೆದು ಅವಸರವಸರವಾಗಿ ಕೊಠಡಿಯ ಬಾಗಿಲು ತೆರೆದು ದೀಪ ಉರಿಸಿ ಬಾಗಿಲಿಗೆ ಅಗಳಿ ಹಾಕಿದ. ತುಂಬಾ ಹೊತ್ತು ಕಿವಿಗೊಟ್ಟು ನಿಂತ. ಅರೆಸ್ಟ್ ವಾರಂಟ್‌ನೊಡನೆ ಪೊಲೀಸರು ಬರಬಹುದೇ? ಇಲ್ಲ ಯಾರೂ ಇಲ್ಲ, ಸಮಾಧಾನವಾಯಿತು. ಕಿಸೆಯಿಂದ ಅರ್ಜೆಂಟಾಗಿ ಪತ್ರ ತೆಗೆದು ಬೆಳಕಿಗೆ ಹಿಡಿದು ಬೇಗಬೇಗನೆ ಓದಿದ.

ಪ್ರೀತಿಯ ಜಗದೀಶ್!

ಪೊಲೀಸ್ ಅರೆಸ್ಟ್‌ವಾರೆಂಟ್‌ನೊಂದಿಗೆ ಮತ್ತೆ ನಿಮ್ಮ ಮನೆಯನ್ನು ಪರಿಶೋಧಿಸಿ ತಪಾಸಣೆ ಮಾಡಲಾಗಿದೆ. ಡಿ.ಎಸ್.ಪಿ., ಇನ್‌ಸ್ಪೆಕ್ಟರ್, ಐವತ್ತರಷ್ಟು ಪೊಲೀಸರು, ಸುಮಾರು ಎಂಟುನೂರು ಜನರು ಸಂಭ್ರಮದಿಂದ ನಿಮ್ಮ ಮನೆಯನ್ನು ಸುತ್ತುವರಿದಿದ್ದಾರೆ. ಮನೆಯ ಸುತ್ತಲೂ ಪೊಲೀಸರು! ಅವರ ಸುತ್ತಲೂ ಜನರು!

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆದೇಶ. ಅದನ್ನು ಡಿ.ಎಸ್.ಪಿ. ಒಮ್ಮೆ ಓದಿ ಎಲ್ಲರಿಗೂ ಕೇಳಿಸಿದ. ನಿಮ್ಮ ತಂದೆ ತಾಯಿಂದಿರನ್ನು, ಸಹೋದರ ಸಹೋದರಿಯರನ್ನು ಹೊರಗೆ ಬರಲು ಆತನೇ ಆಜ್ಞಾಪಿಸಿದ. ಆ ಮಳೆಯಲ್ಲಿ ಅವರೆಲ್ಲ ಅಂಗಳಕ್ಕೆ ಬಂದು ನಿಂತರು.

ತಪಾಸಣೆ ಎರಡು ಗಂಟೆಗಳ ಕಾಲ ನಡೆಯಿತು. ಹಳೆಯ ಪೆಟ್ಟಿಗೆಗಳು, ಬಟ್ಟೆಯ ಕಟ್ಟುಗಳು, ಏನೆಲ್ಲಾ ಇದ್ದುವು – ಎಲ್ಲಾ ತೆಗೆದು ಹೊರಗೆಸೆದರು. ನಿಮ್ಮ ಗುರುತಿರುವ ಏನೂ ಅಲ್ಲಿ ಕಾಣಸಿಗಲಿಲ್ಲ! ಪೊಲೀಸ್ ಇನ್‌ಸ್ಪೆಕ್ಟರ್ ನಿಮ್ಮ ಅಪ್ಪ ಅಮ್ಮನನ್ನು ಬಹಳ ಬೈದರು. ನಿಮ್ಮ ಅಮ್ಮನಲ್ಲಿ ಇನ್‌ಸ್ಪೆಕ್ಟರ್ ಕೇಳಿದ: 'ನೀನು ಯಾಕೆ ಅವನನ್ನು ಹೆತ್ತಿದ್ದು?' ಅಮ್ಮ ಅದಕ್ಕೇನೋ ಹೇಳಿದ್ದಕ್ಕೆ ಇನ್‌ಸ್ಪೆಕ್ಟರ್ ಹಲ್ಲು ಕಡಿದುಕೊಂಡು ಕಾಲೆತ್ತಿದ – ನಿಮ್ಮ ಅಮ್ಮನನ್ನು ಒದೆಯಲು!

ಗೆಳೆಯಾ, ನಿಮ್ಮನ್ನು ಹಿಡಿದು ಕೊಡುವವರಿಗೆ ಇನಾಮಾಗಿ ತುಂಬಾ ದೊಡ್ಡ ಮೊತ್ತದ ಹಣವಿದೆ! ನಿಮ್ಮ ವಾಸಸ್ಥಳ ತಿಳಿದುಬಿಟ್ಟಿದೆ. ಬೇಗಬೇಗ ಜಾಗ ಬಿಡುವುದು.

–ರಾಘವನ್

ಬೆವರನ್ನು ಒರಸಿ ಪತ್ರವನ್ನು ಮುದ್ದೆ ಮಾಡಿದ.

ಜಗದೀಶ ಚಾಪೆಯ ಅಡಿಯಿಂದ ಕಠಾರಿಯನ್ನು ಹುಡುಕಿ ತೆಗೆದು ಎದ್ದುನಿಂತ. ಕೆಳಗೆ ಬಿದ್ದಿದ್ದ ಕವರು ಮತ್ತು ಪತ್ರವನ್ನು ಆತ ತೆಗೆದುಕೊಂಡ. ಆಗ ಕವರಿನೊಳಗಿದ್ದ ಇನ್ನೊಂದು ಕಾಗದದ ತುಂಡನ್ನು ಆತ ನೋಡಿದ. ಜಗದೀಶ ಅದನ್ನು ತೆಗೆದು ಬಿಡಿಸಿ ಓದಿದ:

'ಮಗನೇ!' ನೀನು ಆಲೋಚನೆ ಮಾಡದೆ ಏನನ್ನೂ ಮಾಡಬಾರದು. ಎಲ್ಲ ವಿಷಯಗಳನ್ನು ತಿಳಿದು ನೀನು ಸ್ವಲ್ಪವೂ ವಿಚಲಿತನಾಗಬಾರದು. ಸದ್ಯ ನೀನು ಸುರಕ್ಷಿತವಾಗಿರು.

–ನಿನ್ನ ಅಮ್ಮ

ಬೆವರು ಹನಿಗಳು ತೊಟ್ಟಿಕ್ಕುವುದನ್ನು ನೋಡಿಕೊಂಡೋ ಎಂಬಂತೆ ಆತ ಕುಳಿತುಕೊಂಡಾಗ ಹೊರಗಿನಿಂದ ನಡೆದು ಸಮೀಪಿಸುತ್ತಿರುವ ಹೆಜ್ಜೆ ಸಪ್ಪಳಗಳು! ಆತ ಬೆಚ್ಚಿ ಎಚ್ಚೆತ್ತ... ಸ್ಪಷ್ಟವಾದ ಹೆಜ್ಜೆ ಸದ್ದು! ಒಂದಲ್ಲ ಹಲವು!

ಡಬ್! ಡಬ್! ಒಂದೇ ಸವನೆ ಬಾಗಿಲು ಬಡಿಯುವ ಶಬ್ದ!

'ಹೂಂ! ಬಾಗಿಲು ತೆಗೆ' ಪೊಲೀಸನ ಕಠಿಣವಾದ ಧ್ವನಿ! ಮುಂದುವರಿದು ಡಬ್! ಡಬ್! ಶಬ್ದವೂ!

ಜಗದೀಶ ಪತ್ರಗಳನ್ನು, ಪುಸ್ತಕಗಳನ್ನು, ಕೆಲವು ಪೇಪರ್ ಕಟ್ಟಿಂಗ್ಸ್‌ಗಳನ್ನೆಲ್ಲ ಬಾಚಿ ಬೆಲ್ಟಿನ ನಡುವೆ